ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಬೇಕು ಹಾಗೂ ಹಿಂದುಳಿದ ವರ್ಗಗಳ ಅಧ್ಯಯನ ಸಂಸ್ಥೆಯನ್ನು ಸ್ಥಾಪನೆ ಮಾಡಬೇಕೆಂದು ಉದ್ದೇಶ ಇದೆಯೆಂದು ಅವರು ದೈವಾಧೀನರಾದಾಗ ಆಗ ಅಧಿಕಾರದಲ್ಲಿದ್ದಂತಹ ಶ್ರೀಮಾನ್ ಗುಂಡೂರಾವ್ ಅವರು ಹೇಳಿದ್ದರು. ಆನಂತರ ಹೊಸದಾಗಿ ಅಧಿಕಾರಕ್ಕೆ ಬಂದಂತಹ ಸರ್ಕಾರ ಶ್ರೀ ದೇವರಾಜ ಅರಸ್‌ರವರು ಸ್ಥಾಪನೆ ಮಾಡಿದಂತಹ ಕರ್ನಾಟಕ ಕ್ರಾಂತಿರಂಗ ಹಾಗೂ ಜನತಾ ಪಕ್ಷದ ಮೈತ್ರಿ ಕೂಟದಿಂದ ಚುನಾವಣೆಯಲ್ಲಿ ಗೆದ್ದು ಬಂದ ಮೇಲೆ ಈ ಕೆಲಸವನ್ನು ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳಾದ ಮೇಲೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ತಮ್ಮ ಪಲವಾರು ಸಾರ್ವಜನಿಕ ಸಭೆಗಳಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನಂತರ ಟೌನ್ ಹಾಲಿನಲ್ಲಿ ನಡೆದಂತಹ ಸಭೆಯಲ್ಲೂ ಇದೇ ಮಾತನ್ನು ಹೇಳಿದ್ದಾರೆ. ಆದ್ದರಿಂದ ಶ್ರೀಮಾನ್ ದಿವಂಗತ ದೇವರಾಜ ಅರಸ್‌ರವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡುವುದು ಮತ್ತು ಹಿಂದುಳಿದ ವರ್ಗಗಳವರ ಅಧ್ಯಯನ ಸಂಸ್ಥೆಯನ್ನು ಸ್ಥಾಪನೆ ಮಾಡುವ ಬಗ್ಗೆ ಸರ್ಕಾರದ ಧೋರಣೆ ಏನು, ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಈ ಒಂದು ಕಾರ್ಯ ಯಾವ ಹಂತದಲ್ಲಿದೆ ಎಂಬುದನ್ನು ಸರ್ಕಾರ ತಿಳಿಸಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ವಿಚಾರ ಪ್ರಸ್ತಾಪ ಮಾಡಿದ್ದಾರೆ. ನಾನು ನೋಡಿ ಅವರಿಗೆ ಉತ್ತರ ತಿಳಿಸುತ್ತೇನೆ.

ಶ್ರೀ ಎಂ. ಮಹದೇವ್.— ಅಪ್ಪ ಅನ್ನುವವರನ್ನೇ ಅಪ್ಪ ಅನ್ನುವುದಿಲ್ಲ. ಇವರು ಚಿಕ್ಕಪ್ಪನನ್ನು ಅಪ್ಪ ಅಂತ ಅನ್ನುತ್ತಾರೆಯೇ? ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನೇ ಪ್ರತಿಷ್ಠಾಪನೆ ಮಾಡಿಲ್ಲ. ಇನ್ನು ಶ್ರೀಮಾನ್ ದೇವರಾಜ್ ಅರಸ್‌ರವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡುತ್ತಾರೆಯೇ?

ಶ್ರೀ ಪಂಪಾಪತಿ.— ಮಾಡದಿದ್ದರೆ ನಾವು ಸುಮ್ಮನೆ ಇರುತ್ತೇವೆಯೇ? ಶ್ರೀಮಾನ್ ದೇವರಾಜ ಅರಸ್‌ರವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿ ಎಂದು ಕೇಳುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.— ಒಂದು ವೇಳೆ ಸರ್ಕಾರ ಶ್ರೀ ದೇವರಾಜ ಅರಸ್‌ರವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡದಿದ್ದರೆ ನೀವು ರಾಜೀನಾಮೆಯನ್ನು ಕೊಡುತ್ತೀರಾ? ಇಲ್ಲ ನಿಮ್ಮ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ?

(ಗೊಂದಲ)

ಶ್ರೀ ಕೆ. ಶಿವಮೂರ್ತಿ.— ಶ್ರೀಮಾನ್ ದೇವರಾಜ ಅರಸ್‌ರವರ ಹೆಸರನ್ನು ಹೇಳಿಕೊಂಡು ಗೆದ್ದು ಬಂದಿರತಕ್ಕ ಜನ .....

ಅಧ್ಯಕ್ಷರು.— ಸಭೆಯಲ್ಲಿ ಈ ರೀತಿ ಗಲಾಟೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಬೇರೆ ರೂಪದಲ್ಲಿ ನೋಟೀಸ್ ಕೊಡಿ. ಚರ್ಚೆ ಮಾಡೋಣ.

ಶ್ರೀ ಕೆ. ಶಿವಮೂರ್ತಿ.— ತಾವು ಕೂಡ ಶ್ರೀ ದೇವರಾಜ ಅರಸ್‌ರವರ ಜೊತೆಯಲ್ಲಿದ್ದವರು.

ಅಧ್ಯಕ್ಷರು.— ಅದು ವಿಚಾರ ಬೇರೆ. ತಾವು ಶ್ರೀಮಾನ್ ದೇವರಾಜ ಅರಸ್‌ರವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡುವ ಬಗ್ಗೆ ವಿಚಾರ ಪ್ರಸ್ತಾಪ ಮಾಡಿದ್ದೀರಿ. ಮಂತ್ರಿಗಳು ನೋಡಿ ಹೇಳುತ್ತೇನೆಂದು ಹೇಳಿದ ಮೇಲೆ ಮುಗಿಯಿತು. ಉಳಿದಿರತಕ್ಕ ನಿಯಮಗಳು ಏನೇನು ಇವೆ, ಯಾವ ಯಾವ ನಿಯಮಗಳನ್ನು ಹಾಕಿಕೊಂಡಿದ್ದೀವೆ. ಆ ನಿಯಮಗಳನ್ನೆಲ್ಲಾ ನಿಲ್ಲಿಸಿಬಿಟ್ಟು 334ನ್ನು ಮಾತ್ರ ತೆಗೆದುಕೊಳ್ಳಬೇಕೆಂದು ಸದನ ತೀರ್ಮಾನ ಮಾಡಿದರೆ ನಾನು ಅದಕ್ಕೆ ಬದ್ಧನಾಗುತ್ತೇನೆ. ಸರ್ಕಾರದಿಂದ ಉತ್ತರವನ್ನು ತರಿಸಬೇಕೆಂಬುದರ ಬಗ್ಗೆ ಕೆಲವು ನಿಯಮಗಳು ಇವೆ. ಆ ನಿಯಮಗಳ ಪ್ರಕಾರ ನೋಟೀಸ್ ಕೊಟ್ಟು ನನಗೆ ಸ್ವಲ್ಪ ಶಕ್ತಿಯನ್ನು ಕೊಟ್ಟರೆ, ತಮ್ಮ ಪರವಾಗಿ ಸರ್ಕಾರದಿಂದ ಉತ್ತರ ತರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಏನಾಗಿದೆ 334ರ ಕೆಳಗೆ ತಾವು ನೋಟೀಸ್ ಕೊಟ್ಟ ಮೇಲೆ ಸರ್ಕಾರದಿಂದ ಉತ್ತರವನ್ನು ಬಯಸುವುದಿಲ್ಲವೆಂದು ಒಪ್ಪಿಕೊಂಡೇ ಕಳುಹಿಸುತ್ತಿದ್ದೀರಿ. ಆದ್ದರಿಂದ ಇದು ಒಳ್ಳೆಯದಲ್ಲ. ಉತ್ತರವನ್ನು ಬಯಸಿ ಕೇಳತಕ್ಕಂತ ನಿಯಮಗಳೂ ಇವೆ. ಅವುಗಳನ್ನು ಉಪಯೋಗ ಮಾಡಿಕೊಳ್ಳಿ. ನಾನೂ ಕೂಡ ಸರ್ಕಾರದ ಮೇಲೆ ಪ್ರಭಾವ ಬೀರಿ ಉತ್ತರ ತರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

(iv) ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಉಪ-ಕುಲಪತಿಗಳ ನೇಮಕ

ಶ್ರೀ ಪಿ. ರಾಮ್‌ದೇವ್.—ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿರತಕ್ಕ ಉಪ-ಕುಲಪತಿಗಳ ಅವಧಿ ಮುಗಿದಿದ್ದು, ಆ ಸ್ಥಾನದಲ್ಲಿ ಬೇರೆಯವರನ್ನು ಉಪ-ಕುಲಪತಿಗಳನ್ನಾಗಿ ಸರ್ಕಾರ ನೇಮಕ ಮಾಡಬೇಕಾಗಿದೆ. ಇದರ ಬಗ್ಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನ ವತಿಯಿಂದ 3 ಜನರ ಹೆಸರನ್ನು ಪ್ಯಾನಲ್ ಮಾಡಿ, ಅನುಮತಿಗಾಗಿ ರಾಜ್ಯಪಾಲರಿಗೆ ಕಳುಹಿಸಿಕೊಟ್ಟಿದ್ದಾರೆ. ಆ ರೀತಿ ಕಳುಹಿಸಿ ಬಹಳ ದಿವಸಗಳಾಗಿವೆ. ಈ ಬಗ್ಗೆ ರಾಜ್ಯಪಾಲರು ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿ ತೀರ್ಮಾನ

ಮಾಡಬೇಕಾದುದು ರೂಢಿಯಲ್ಲಿದೆ. ಅವರು ಒಂದು ವೇಳೆ ಸಮಾಲೋಚನೆ ಇದುವರೆವಿಗೂ ಮಾಡದಿದ್ದರೆ, ಸಮಾಲೋಚನೆ ಮಾಡಬೇಕಾದುದು ಅತ್ಯಗತ್ಯ. ಆದ್ದರಿಂದ ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಆದಷ್ಟು ಶೀಘ್ರವಾಗಿ ನೇಮಕ ಮಾಡುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ ಎಂಬುದನ್ನು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ಹೇಳಿದಂತಹ ವಿಷಯವನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ.

(v) ಬೆಳ್ತಂಗಡಿ ತಾಲ್ಲೂಕಿನ ಸಿ. ಎ. ಬ್ಯಾಂಕಿನ ಅವ್ಯವಹಾರದ ಬಗ್ಗೆ

ಶ್ರೀ ವಸಂತ ಬಂಗೇರ — ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಸಿ.ಎ. ಬ್ಯಾಂಕಿನಲ್ಲಿ ಹಿಂದೆ ಇದ್ದಂತಹ ಅಧ್ಯಕ್ಷರು ಅವ್ಯವಹಾರ ಮಾಡಿರುವ ಬಗ್ಗೆ ಅವರ ಮೇಲೆ ವ್ಯಾಜ್ಯ ನಡೆಯುತ್ತಿದೆ. ಈ ವರ್ಷ ಚುನಾವಣೆಯಲ್ಲಿ 9ಜನರ ಒಂದು ಗುಂಪು ಮತ್ತು 6 ಜನರ ಇನ್ನೊಂದು ಗುಂಪು, ಈ ಪ್ರಕಾರವಾಗಿ ಚುನಾಯಿತರಾಗಿದ್ದಾರೆ. 9 ಜನರ ಗುಂಪು, ಚುನಾವಣೆಯ ದಿನವನ್ನು ಮುಂದೂಡಿ ಒಂದು ಅರ್ಜಿ ಸಲ್ಲಿಸಿದ್ದಾರೆ. ಆದರೆ 6 ಜನ ಇರತಕ್ಕಂತಹ ಮತ್ತೊಂದು ಗುಂಪು, ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಪತ್ತಿರ ಬೆಳ್ತಂಗಡಿಯಲ್ಲಿರುವ ಸಿ.ಇ.ಒ. ಮುಖಾಂತರ ಪಿತೂರಿ ನಡೆಸಿ ಈ 9 ಜನರ ಗುಂಪು ಯಾವಾಗ ಊರಿನಲ್ಲಿ ಇಲ್ಲದ ಸಮಯವನ್ನು ನೋಡಿ ಚುನಾವಣೆಯ ದಿನಾಂಕವನ್ನು ನಿಗದಿ ಮಾಡಿ, ಆ ದಿವಸ ಆಲ್ಲಿಗೆ ಬಂದು ಅವರಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ. ಆ ರೀತಿ ಆಯ್ಕೆ ಮಾಡಿದಂತಹ ಅಧ್ಯಕ್ಷರಾದರೂ ಯಾರೆಂದರೆ, ಹಿಂದೆ 75-76ರಲ್ಲಿ ಏನು ಅವ್ಯವಹಾರ ಮಾಡಿದ್ದಾರೆಂದು ವ್ಯಾಜ್ಯ ನಡೆಯುತ್ತಿದೆಯೋ ಅವರನ್ನೇ ಪುನಃ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆದ್ದರಿಂದ ಇದರಲ್ಲಿ ಆಕ್ರಮ ವ್ಯವಹಾರ ಮಾಡಿದಂತಹ ಅಧಿಕಾರಿಗಳನ್ನು ತಕ್ಷಣ ಅಮಾನತ್ತಿನಲ್ಲಿಟ್ಟು, ಇದರ ಬಗ್ಗೆ ತನಿಖೆ ನಡೆಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್ ಎಲ್. ಜಾಲಪ್ಪ.— ನಾನು ಈಗ ತಾನೆ ಬಂದಿದ್ದೇನೆ. ವಿವರಗಳನ್ನು ನಾಳೆ ತರಿಸಿ ಕೊಡುತ್ತೇನೆ.

ಅಧ್ಯಕ್ಷರು.— ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ನೀವು ಕೇಳಿರುವ ವಿಷಯವನ್ನು ಗಮನ ಸೆಳೆಯುವ ಸೂಚನೆಯ ಮೂಲಕವೂ ಕಳಿಸಿದ್ದೀರಿ. ಇಲ್ಲಿ 334ರ ಒಳಗೆ ಕಳಿಸಿದರೆ ಉತ್ತರ ಕೊಡಲೇ ಬೇಕೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಗಮನ ಸೆಳೆಯುವ ಸೂಚನೆಯನ್ನು ಕಳಿಸಿದ್ದೇನೆ. ಯಾವುದರಲ್ಲೂ ಉತ್ತರ ಬಂದಿಲ್ಲ. ಯಾವಾಗ ಉತ್ತರ ಕೊಡುತ್ತೇವೆ ಎಂದು ಕೂಡ ಹೇಳಿಲ್ಲ.

ಅಧ್ಯಕ್ಷರು.— ಶ್ರೀ ನಾಣಯ್ಯನವರೇ ನೀವು ಹೇಳಿ.

vi) ಕೊಡಗು ಜಿಲ್ಲೆಯಲ್ಲಿ ಸರ್ಕಾರಿ ವೈದ್ಯರುಗಳ ನೇಮಕಾತಿ

ಶ್ರೀ ಎಂ. ಎಂ. ನಾಣಯ್ಯ — ಕೊಡಗು ಜಿಲ್ಲೆಯಲ್ಲಿ 36 ಸರ್ಕಾರಿ ವೈದ್ಯರ ಹುದ್ದೆಗಳು ಖಾಲಿ ಬಿದ್ದಿವೆ. ಪೆಡ್‌ಕ್ವಾಟರ್ಸ್ ಆಸ್ಪತ್ರೆಯಲ್ಲಿ 14 ಹುದ್ದೆಗಳೂ, ಗ್ರಾಮಾಂತರ ಪ್ರದೇಶಗಳಲ್ಲಿ 22 ವೈದ್ಯರ ಹುದ್ದೆಗಳು ಒಟ್ಟು 36 ಹುದ್ದೆಗಳು ಖಾಲಿಯಿವೆ. ಇಲ್ಲಿಯ ಜನರು ವೈದ್ಯಕೀಯ ಸೌಲಭ್ಯ ಈ ಆಸ್ಪತ್ರೆಗಳಲ್ಲಿ ಸಿಗದೆ ತುಂಬಾ ತೊಂದರೆಗೊಳಗಾಗಿದ್ದಾರೆ. ಹೀಗಾಗಿ ಇವರು ಖಾಸಗಿ ನರ್ಸಿಂಗ್ ಹೋಮ್‌ಗಳಲ್ಲಿ ಚಿಕಿತ್ಸೆ ಪಡೆಯಬೇಕಾದ ಪರಿಸ್ಥಿತಿ ಬಂದಿದೆ. ಅನೇಕ ಜನರಿಗೆ ಇಲ್ಲಿ ಚಿಕಿತ್ಸೆ ಪಡೆಯುವುದು ಬಹಳ ದುಬಾರಿಯಾಗಿದೆ ಆದ್ದರಿಂದ ಸರ್ಕಾರ ತಕ್ಷಣ ಕ್ರಮ ತೆಗೆದುಕೊಂಡು ಖಾಲಿ ಬಿದ್ದಿರುವ 36 ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ — ನಾನು ಆರೋಗ್ಯ ಮಂತ್ರಿಗಳಿಗೆ ಈ ವಿಚಾರ ತಿಳಿಸಿ ಇದರ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಕೆ. ಕಾಂತಾ. — ಅಧ್ಯಕ್ಷರೇ, ಸರ್ಕಾರಿ ಡೈರಿ ಹಾಲು ವಿತರಣೆ ಮಾಡಲಿಕ್ಕೆ ಹೆಂಡರು ಗಳಿಗೆ ಕಮಿಷನ್ ಮೂರರಷ್ಟು ಸಿಗುತ್ತಿತ್ತು ಹೋದ ತಿಂಗಳವರೆಗೆ .....

ಅಧ್ಯಕ್ಷರು.— ಮಾನ್ಯ ಕಾಂತಾರವರೇ ನೀವು ಗಮನ ಸೆಳೆಯುವ ಸೂಚನೆಯನ್ನೂ ಕಳಿಸಿದ್ದೀರಿ. ಈಗ ಮಂತ್ರಿಗಳು ಉತ್ತರ ಹೇಳಿಬಿಟ್ಟರೆ ಮತ್ತೆ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಗಮನ ಸೆಳೆಯುವ ಸೂಚನೆಗೆ ಪೂರ್ಣ ಪ್ರಮಾಣದ ಉತ್ತರ ಬರುತ್ತದೆ. ಆದಕ್ಕಾಗಿ ನೀವು ಕಾಯುವುದಾದರೆ ಈಗ ಕೇಳಬೇಡಿ.

ಶ್ರೀ ಎಸ್. ಕೆ. ಕಾಂತಾ.—ಗಮನ ಸೆಳೆಯುವ ಸೂಚನೆ ಬರುವುದಾದರೆ ಈಗ ನಾನು ಕೇಳುವುದಿಲ್ಲ.

ಶ್ರೀ ಎಫ್. ಎ. ಕೊಪ್ಪದ್.— ಅಧ್ಯಕ್ಷರೇ, ರಾಮದುರ್ಗ ತಾಲ್ಲೂಕಿನಲ್ಲಿ ಮುನ್ನೂರು ಸಾಮಿಲ್ ಗಳಿವೆ. ವಿದ್ಯುಚ್ಛಕ್ತಿ ಕೊರತೆಯಿಂದ ಅವುಗಳು ಬಹಳ ತೊಂದರೆಗೆ ಒಳಗಾಗಿವೆ. ಅವರು ಚಳುವಳಿ ನಡೆಸುವ ಸಂಭವ ಇದೆಯೆಂದು ತಿಳಿದುಬಂದಿದೆ.